ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.1515/2023

| | | | |
|---|---|---|---|
| ಸಾಕ್ಷಿಯ ಹೆಸರು | : ಹೆಚ್.ಬಿ.ಸಂತೋಷ್ | ಸಿ.ಡಬ್ಲ್ಯು | 7 |
| ತಂದೆಯ ಹೆಸರು | : ಪುಟ್ಟಸ್ವಾಮಿ | ಪಿ.ಡಬ್ಲ್ಯು | 3 |
| ವಯಸ್ಸು | : 48 ವರ್ಷ | | |
| ಉದ್ಯೋಗ | : ಅಬಕಾರಿ ಉಪನಿರೀಕ್ಷಕರು | | |
| ವಾಸ ಸ್ಥಳ | : ಚಿಕ್ಕಮಗಳೂರು ಉಪವಿಭಾಗ | | |

ದಿನಾಂಕಃ13.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನನಗಿಂತ ಮೊದಲು ಇದ್ದ ಅಬಕಾರಿ ನಿರೀಕ್ಷಕರಾದ ಎಂ.ನಾಗರಾಜು ರವರ ನಿವೃತ್ತಿಯ ನಂತರ ಪ್ರಕರಣದ ಕಡತವನ್ನು ದಿನಾಂಕ 22.08.2023 ರಂದು ಪಡೆದುಕೊಂಡು ಪರಿಶೀಲನೆ ಮಾಡಿದ್ದೇನೆ. ದಿನಾಂಕ 13.09.2023 ರಂದು ಪಂಚರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕ 12.09.2023 ರಂದು ಸ್ಥಳದ ಮಾಲೀಕರಿಗೆ ಅಬಕಾರಿ ಇಲಾಖೆಯಿಂದ ನೋಟೀಸು ಜಾರಿ ಮಾಡಿದ್ದೇನೆ. ನಂತರ ನನ್ನ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ದಿನಾಂಕ 12.09.2023 ರ ನೋಟೀಸನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು 7(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಪಿ.ಡಿ.ಓ ರವರ ವರದಿಯ ಆಧಾರದ ಮೇಲೆ ನಿಪಿ-7 ರಂತೆ ನೋಟೀಸು ಕೊಟ್ಟಿರುತ್ತೇನೆ. ನಿಪಿ-7 ನ್ನು ಕೊಟ್ಟಿರುವುದನ್ನು ಹೊರತು ಪಡಿಸಿ ನಾನು ಸ್ವತಂತ್ರ್ಯವಾಗಿ ಯಾವುದೇ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಸರಿಯಾಗಿ ತನಿಖೆಯನ್ನು ನಡೆಸದೇ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.